ಸಿನಿಮಾ ವಿಷಯಕ್ಕೆ ಸಂಬಂಧಿಸಿದಂತೆ ಪರಿಣತರನ್ನು ಭೇಟಿಯಾಗಿ ವಿಷಯ ಸಂಗ್ರಹಿಸುವುದು, ತಿಂಗಳು–ವರ್ಷಗಟ್ಟಲೆ ಶೋಧನೆಯಲ್ಲಿ ತೊಡಗಿಕೊಂಡು ಸಿನಿಮಾ ರೂಪಿಸುವುದು, ಸ್ಥಳಗಳಿಗೆ ಭೇಟಿ ಕೊಡುವುದು ಪೃಥ್ವಿ ಅವರು ಸಿನಿಮಾ ಕಟ್ಟುವಲ್ಲಿ ಅನುಸರಿಸುವ ರೂಢಿ. ಇದೇ ಅವರ ಸಿನಿಮಾಗಳ ಹುರುಳು ಕೂಡ.

ಸಿನಿಮಾವೊಂದನ್ನು ಹೆಣೆಯಲು ಹೊರಟಾಗ ಪಕ್ಕಾ ಕಮರ್ಷಿಯಲ್ ಸಿನಿಮಾಗಳ ಹಾದಿಯಲ್ಲೇ ಹೊರಳಿಬಿಡುವ ಅಪಾಯ ಅರಿತಿರುವ ಅವರು, ಅದನ್ನು ತಪ್ಪಿಸಲು ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ತಿದ್ದಿತೀಡುತ್ತಾರೆ.

ಆದರೆ ಸಂಶೋಧನೆ ಹಾಗೂ ಕಲ್ಪನೆ ಇವರಡನ್ನೂ ಸಿನಿಮಾದಲ್ಲಿ ಹದವಾಗಿ ಬೆರೆಸದಿದ್ದರೆ ಸಿನಿಮಾ ಸೋಲುವ ಸಾಧ್ಯತೆಯೂ ಇದೆ ಎನ್ನುವುದು ಅವರ ಅಭಿಪ್ರಾಯ. ‘ರಿಸರ್ಚ್‌ನಲ್ಲಿ ಒಂದಷ್ಟು ಮ್ಯಾಟರ್ ಆಫ್ ಫ್ಯಾಕ್ಟ್ ಸಿಗುತ್ತದೆ ಅಷ್ಟೆ. ಆದರೆ ಅದನ್ನು ಅಳವಡಿಸಿ ಸಿನಿಮಾಗೆ ಬೇಕಾದ್ದು, ಬೇಡದ್ದು ನೋಡಿ, ಯಾವ ದಿಕ್ಕಿನಲ್ಲಿ ಹೋದರೆ ಒಂದು ಓಪನ್ ಎಂಡ್ ಸಿಗುತ್ತದೆ ಎಂಬ ಆಲೋಚನೆಯಲ್ಲಿ ಕಥೆ ರೂಪಿಸುವುದು ಮುಖ್ಯ. ಸಂಶೋಧನೆಯನ್ನು ಆ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದು ಸವಾಲು. ಈ ವಿಷಯದಲ್ಲಿ ‘ಹದಿನೇಳೆಂಟು’ ಸಿನಿಮಾ ಸವಾಲೆನಿಸಿತ್ತು. ಆದರೆ ಇದನ್ನು ಕಷ್ಟ, ಸವಾಲು ಎನ್ನುವುದಕ್ಕಿಂತ ಪ್ರಕ್ರಿಯೆಯೇ ಎಂದು ಭಾವಿಸಬೇಕು’ ಎಂದು ಹೇಳುತ್ತಾರೆ.

ಹೀಗೆ ಸಾಕಷ್ಟು ಶ್ರಮ ಹಾಕಿ ರೂಪಿಸಿದ ಸಿನಿಮಾಗಳು ಸಿನಿಮೋತ್ಸವದಲ್ಲಿ ಮೆಚ್ಚುಗೆ ಗಳಿಸುವಷ್ಟಕ್ಕೇ ಸೀಮಿತಗೊಂಡು ಜನರನ್ನು ತಲುಪುವಲ್ಲಿ ಸೋಲುತ್ತವೆ. ಸಿನಿಮೋತ್ಸವಗಳಲ್ಲಿ ಬರುವ ಪ್ರತಿಕ್ರಿಯೆಗಿಂತ ಜನರಿಂದ ಬರುವ ಪ್ರತಿಕ್ರಿಯೆಯೇ ಮುಖ್ಯ ಎನ್ನುವ ಪೃಥ್ವಿ, ಈ ಸಿನಿಮಾಗಳನ್ನು ಜನರ ಬಳಿಗೆ ಕೊಂಡೊಯ್ಯಲೇಬೇಕಿರುವ ಅಗತ್ಯದ ಕುರಿತೂ ಮಾತನಾಡುತ್ತಾರೆ.

‘ಸಿನಿಮೋತ್ಸವಗಳಲ್ಲಿ ಬರುವ ಪ್ರತಿಕ್ರಿಯೆಗಳಿಗಿಂತ ನನಗೆ ಗೊತ್ತಿಲ್ಲದೇ ಇದ್ದವರ ಟೀಕೆ ಅಥವಾ ಹೊಗಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ಇಂಥ ಸಿನಿಮಾಗಳು ಜನರಿಗಾಗೇ ಮಾಡಿರುವುದು. ಹೀಗಾಗಿ ಅದು ಅವರನ್ನು ತಲುಪಲೇಬೇಕು’ ಎನ್ನುತ್ತಾರೆ.

ಪ್ಯಾರೆಲಲ್ ಸಿನಿಮಾಗಳೆಡೆಗಿನ ಮನೋಭಾವದ ಕುರಿತು ಮಾತನಾಡಿದ ಅವರು, ‘ಪ್ಯಾರೆಲಲ್ ಸಿನಿಮಾ ಎಂದರೆ ಬೋರ್ ಅನ್ನುವವರಿದ್ದಾರೆ. ಇದಕ್ಕೆ ವೈರುಧ್ಯವೆಂಬಂತೆ, ಅವಾರ್ಡ್ ಬಂದ ಕಾರಣಕ್ಕೆ ಅದನ್ನು ದೊಡ್ಡ ಸಿನಿಮಾ ಎಂದು ಸುಮ್ಮನೆ ಹೊಗಳುವವರೂ ಇದ್ದಾರೆ. ಆದರೆ ಈ ಎರಡೂ ಆಗಬಾರದು. ಸಿನಿಮಾ ನೋಡಿ ತೀರ್ಮಾನ ಮಾಡಬೇಕು’ ಎಂದು ಹೇಳುತ್ತಾರೆ.

ಸದ್ಯ, ‘ಹದಿನೇಳೆಂಟು’ ಸಿನಿಮಾ ಬಿಡುಗಡೆ ನಂತರ, ಅದಕ್ಕೆ ಉತ್ತಮ ಪ್ರತಿಕ್ರಿಯೆ ಲಭಿಸಿದರೆ, ಎರಡನೇ ಭಾಗ ರೂಪಿಸುವ ಆಲೋಚನೆಯಲ್ಲಿದ್ದಾರೆ. ‘ರಾಶಿದ್’ ಎಂಬ ಪ್ರಾಜೆಕ್ಟ್‌ನಲ್ಲಿ ತೊಡಗಿಕೊಂಡಿದ್ದು, ವೆಬ್ ಸೀರೀಸ್ ಕೂಡ ಅವರ ಪಟ್ಟಿಯಲ್ಲಿದೆ. ‘ಒಂದೊಳ್ಳೆಯ ಕಥೆ ನೀಡಬೇಕು ಎಂಬುದಷ್ಟೇ ನನ್ನ ಆದ್ಯತೆ. ಉತ್ತಮ ಸಿನಿಮಾದ ಪ್ರಮುಖ ಉದ್ದೇಶ ಅದಷ್ಟೇ ಆಗಿರಬೇಕು ಕೂಡ. ಇದರ ಹೊರತಾಗಿ ಜನರು ಸಿನಿಮಾದಲ್ಲಿ ಬೇರೆ ಅಂಶಗಳನ್ನು ಇಷ್ಟಪಟ್ಟರೆ ಅದು ಬೋನಸ್...’ ಎಂದು ನಗುತ್ತಾರೆ. ■

# ನಾಟಕ–ಸಿನಿಮಾ ಜೋಲಿಯಲ್ಲಿ ಸೋನು

ರಂಗಭೂಮಿ, ಸಿನಿಮಾ ಈ ಎರಡೂ ಕ್ಷೇತ್ರದಲ್ಲೂ ತೊಡಗಿಕೊಂಡಿರುವ ನಟಿ ಸೋನು ಗೌಡ, ನಟನಾ ಕಲೆಯನ್ನು ಹರಿತಗೊಳಿಸಬಲ್ಲ ಯಾವುದೇ ಮಾಧ್ಯಮವಾದರೂ ಸರಿ, ತಮ್ಮನ್ನು ತಾವು ಪ್ರಯೋಗಕ್ಕೆ ಒಡ್ಡಿಕೊಳ್ಳಲು ಸಿದ್ಧ ಎಂದಿದ್ದಾರೆ.

‘ನನ್ನ ನಟನಾ ಕೌಶಲವನ್ನು ತೋರಬಲ್ಲ, ಆ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅವಕಾಶ ನೀಡುಬಲ್ಲ ವೇದಿಕೆಗಳನ್ನು ಎಕ್ಸ್‌ಪ್ಲೋರ್ ಮಾಡುವ ಆಸೆ. ಹೀಗಾಗಿ ಸದ್ಯ ರಂಗಭೂಮಿ–ಸಿನಿಮಾ ಎರಡೂ ಕಡೆಗಳಲ್ಲೂ ನನ್ನನ್ನು ನಾನು ತೊಡಗಿಸಿಕೊಂಡಿದ್ದೇನೆ. ಎರಡನ್ನೂ ಬ್ಯಾಲೆನ್ಸ್ ಮಾಡುತ್ತಿದ್ದೇನೆ’ ಎಂದು ಹೇಳಿದ್ದಾರೆ.

ಈಚೆಗೆ ‘E=MC2’ ಎಂಬ ಸಸ್ಪೆನ್ಸ್ ಥ್ರಿಲ್ಲರ್ ನಾಟಕದಲ್ಲಿ ಅಭಿನಯಿಸಿರುವ ನಟಿ ಸೋನು, ‘ಧೂಪದ ಮಕ್ಕಳು’ ಎಂಬ ಸಿನಿಮಾ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ಸಿನಿಮಾ ಕುರಿತು ಅವರು ಮಾತನಾಡಿದ್ದು, ‘ಇದು ಸೋಲಿಗ ಮಕ್ಕಳ ಕಥೆ. ತಮ್ಮದೇ ನೆಲೆಯಾದ ಕಾಡಂಚಿನಲ್ಲಿ ಇರಬೇಕೆ ಅಥವಾ ಉನ್ನತ ಶಿಕ್ಷಣ ಪಡೆಯಲು ನಗರಗಳಿಗೆ ವಲಸೆ ಹೋಗಬೇಕೆ ಎಂಬ ಗೊಂದಲದಲ್ಲಿರುವ ಮಕ್ಕಳ ಕಥೆ ಇದಾಗಿದೆ. ಈ ಸಿನಿಮಾದಲ್ಲಿ ನಾನು ಶಿಕ್ಷಕಿಯಾಗಿ ಬಣ್ಣ ಹಚ್ಚಿದ್ದೇನೆ’ ಎಂದಿದ್ದಾರೆ.

‘ಬೆನಕ’ ನಾಟಕ ತಂಡದ ಜೊತೆ ಸೋನು ಗೌಡ ರಂಗಭೂಮಿ ಪಯಣ ಆರಂಭಗೊಂಡಿತು. ಸಿನಿಮಾಗಳ ಕಾರಣವಾಗಿ ಮೂರು ವರ್ಷ ರಂಗಭೂಮಿಯಿಂದ ದೂರವುಳಿದಿದ್ದ ಸೋನು ಮತ್ತೆ ಅಲ್ಲಿಗೆ ಮರಳಿದ್ದಾರೆ. ಜೊತೆಗೆ ಸಿನಿಮಾವನ್ನೂ ಮಾಡುತ್ತಿದ್ದಾರೆ.

‘ರಂಗಭೂಮಿ ಬಗ್ಗೆ ನನಗೆ ಇಷ್ಟವಾಗುವುದೆಂದರೆ, ಅಲ್ಲಿ ತಕ್ಷಣವೇ ಪ್ರತಿಕ್ರಿಯೆ ಸಿಕ್ಕಿಬಿಡುತ್ತದೆ. ಒಂದು ಸಣ್ಣ ತಪ್ಪಿಗೂ ಅವಕಾಶವಿಲ್ಲದಂತೆ ಇರುತ್ತದೆ. ಇಡೀ ನಾಟಕದುದ್ದಕ್ಕೂ ಮೈಯೆಲ್ಲಾ ಕಣ್ಣಾಗಿರಬೇಕಾಗುತ್ತದೆ. ಅದೇ ನನ್ನನ್ನು ಸೆಳೆಯುವ ಸಂಗತಿ’ ಎಂದು ರಂಗಭೂಮಿಯೆಡೆಗಿನ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ. ■

